ಕರ್ನಾಟಕ ವಿಧಾನ ಪರಿಷತ್

01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1303

02. ಮಾನ್ಯ ವಿಧಾನ ಪರಿಷತ್ ಸದಸ್ಯರ ಹೆಸರು : ಶ್ರೀ. ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶನ ಹೊಂದಿದವರು)

03. ಉತ್ತರಿಸುವ ದಿನಾಂಕ : 23-09-2021

04. ಉತ್ತರಿಸುವ ಸಚಿವರು. : ಮಾನ್ಯ ಗೃಹ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ಬೆಂಗಳೂರಿನಲ್ಲಿ ಹಿರಿಯ ನಾಗರೀಕರ ಮೇಲೆ ದೌರ್ಜನ್ಯ, ಹತ್ಯೆ, ಚಿನ್ನಾಭರಣಗಳು ಕಳವು ಪ್ರಕರಣಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಬಂದಿರುತ್ತದೆ.
ಆ	ಕಳೆದ ಮೂರು ವರ್ಷಗಳಿಂದ ಹಿರಿಯ ನಾಗರೀಕರ ಮೇಲೆ ಎಸಗಲಾಗಿರುವ ದೌರ್ಜನ್ಯ ಪ್ರಕರಣಗಳೆಷ್ಟು,	ಕಳೆದ ಮೂರು ವರ್ಷಗಳಿಂದ ಹಿರಿಯ ನಾಗರೀಕರ ಮೇಲೆ ಎಸಗಲಾಗಿರುವ ದೌರ್ಜನ್ಯ ಪ್ರಕರಣಗಳ ವಿವರಗಳನ್ನು ಅನುಬಂಧ ದಲ್ಲಿ ನೀಡಲಾಗಿದೆ.
ಇ	ಇವುಗಳನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?	<u>ಸರ್ಕಾರ ಕೈಗೊಂಡಿರುವ ಕ್ರಮಗಳು.</u> **<u>ಬೆಂಗಳೂರು ನಗರ</u>** ➢ ಬೆಂಗಳೂರು ನಗರ ಪೊಲೀಸ್ ಮತ್ತು ನೈಟಿಂಗೇಲ್ ಮೆಡಿಕಲ್ ಟ್ರಸ್ಟ್ (ಎನ್‌ಎಂಟಿ) ರವರು ವಿಶೇಷವಾಗಿ ಒಂಟಿಯಾಗಿ ಜೀವನ ಮಾಡುತ್ತಿರುವ ಹಿರಿಯ ನಾಗರೀಕರಿಗೆ ಸಹಾಯವಾಣಿ ಕೇಂದ್ರ (ಹೆಲ್ಪ್ ಡೆಸ್ಕ್) ಸ್ಥಾಪಿಸಲಾಗಿದೆ. (ಹಿರಿಯರ ಸಹಾಯವಾಣಿ-1090) ➢ ಪ್ರತಿ ತಿಂಗಳು ಹಿರಿಯ ನಾಗರೀಕರ ಸಭೆಯನ್ನು ಹಮ್ಮಿಕೊಂಡು, ಹಿರಿಯರ ಮೇಲೆ ಆಗುವಂತಹ ದೌರ್ಜನ್ಯಗಳ ಬಗ್ಗೆ ಚರ್ಚಿಸಿ ಅವರ ಕುಂದು-ಕೊರತೆಗಳನ್ನು ಆಲಿಸಲಾಗುತ್ತಿರುತ್ತದೆ ಹಾಗೂ ಹಿರಿಯ ನಾಗರೀಕರ ಮೇಲೆ ದೌರ್ಜನ್ಯದಂತಹ ಪ್ರಕರಣಗಳು ಕಂಡುಬಂದಲ್ಲಿ ಅಂತಹವರ ವಿರುದ್ಧ ಸೂಕ್ತ ಕಾನೂನು ರೀತಿಯ ಕ್ರಮ ಕೈಗೊಳ್ಳ ಲಾಗುತ್ತಿರುತ್ತದೆ. ➢ ಬೆಂಗಳೂರು ನಗರದ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಅಧಿಕಾರಿ/ಸಿಬ್ಬಂದಿಗಳೊಂದಿಗೆ ವಾಸವಿರುವ ಹಿರಿಯ ನಾಗರೀಕರುಗಳು ಮತ್ತು ಪೋಷಕರುಗಳನ್ನೊಳಗೊಂಡ ಸಮಿತಿಯನ್ನು ರಚಿಸಲಾಗುತ್ತಿದೆ, ಸಮಿತಿ ರಚಿಸಿದ ನಂತರ ನಿಯಮಿತವಾಗಿ ಸಭೆಗಳನ್ನು ನಡೆಸಿ, ಅವರ

		ಕುಂದುಕೊರತೆಗಳು ಮತ್ತು ಅಹವಾಲುಗಳನ್ನು ಸ್ವೀಕರಿಸಿ, ಸಮಸ್ಯೆಗಳನ್ನು ಚರ್ಚಿಸಿ ಬಗೆಹರಿಸಲಾಗುತ್ತಿದೆ. ➢ ವಯೋವೃದ್ದರು, ಒಂಟಿ ಮಹಿಳೆಯವರು ನೆಲೆಸಿರುವವರ ಬಗ್ಗೆ ಸರ್ವೆ ನಡೆಸಿ ಠಾಣಾ ಸರಹದ್ದಿನಲ್ಲಿರುವ ಒಂಟಿ ಮಹಿಳೆಯರನ್ನು ಗುರುತಿಸಿ ಇವರುಗಳ ಬಗ್ಗೆ ಸೂಕ್ತ ಗಮನ ನೀಡುವಂತೆ ಚೀತಾ, ಹೊಯ್ಸಳ, ಬೀಟ್ ಸಿಬ್ಬಂದಿಗಳಿಗೆ ಸೂಕ್ತ ತಿಳುವಳಿಕೆ ನೀಡಿದ್ದು, ಇವರುಗಳ ಮನೆಗಳಿಗೆ, ಸಿ.ಸಿ.ಕ್ಯಾಮರಾ, ಸೈರನ್ ವ್ಯವಸ್ಥೆ ಮಾಡಿಕೊಳ್ಳುವಂತೆ ಸೂಕ್ತ ತಿಳುವಳಿಕೆ ನೀಡಲಾಗಿದೆ. **<u>ಬೆಂಗಳೂರು ಜಿಲ್ಲೆ</u>** ➢ ಬೆಂಗಳೂರು ಜಿಲ್ಲೆಯ ಗ್ರಾಮಾಂತರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಪ್ರತಿ ತಿಂಗಳು ಹಿರಿಯ ನಾಗರೀಕರ ಸಭೆಯನ್ನು ಹಮ್ಮಿಕೊಂಡಿದ್ದು, ಹಿರಿಯರ ಮೇಲೆ ಆಗುವಂತಹ ದೌರ್ಜನ್ಯಗಳ ಬಗ್ಗೆ ಚರ್ಚಿಸಿ ಅವರ ಕುಂದು ಕೊರತೆಗಳನ್ನು ಆಲಿಸಲಾಗುತ್ತಿರುತ್ತದೆ. ಹಾಗೂ ಹಿರಿಯ ನಾಗರೀಕರ ಮೇಲೆ ದೌರ್ಜನ್ಯದಂತಹ ಪ್ರಕರಣಗಳು ಕಂಡುಬಂದಲ್ಲಿ ಅಂತಹವರ ವಿರುದ್ದ ಸೂಕ್ತ ಕಾನೂನು ರೀತಿಯ ಕ್ರಮಕೈಗೊಳ್ಳಲಾಗುತ್ತಿರುತ್ತದೆ. ➢ ವಯೋವೃದ್ದರೂ ಒಂಟಿ ಮಹಿಳೆಯರು ನೆಲೆಸಿರುವ ಬಗ್ಗೆ ಸರ್ವೇ ನಡೆಸಿ ಠಾಣಾ ಸರಹದ್ದಿನಲ್ಲಿರುವ ಒಂಟಿ ಮಹಿಳೆಯರನ್ನು ಗುರ್ತಿಸಿ ಇವರುಗಳ ಬಗ್ಗೆ ಸೂಕ್ತ ಗಮನ ನೀಡುವಂತೆ ಬೀಟ್ ಸಿಬ್ಬಂದಿಗಳಿಗೆ ಸೂಕ್ತ ತಿಳುವಳಿಕೆ ನೀಡಿದ್ದು, ಇವರುಗಳ ಮನೆಗಳಿಗೆ ಸಿ.ಸಿ. ಕ್ಯಾಮೆರಾ, ಸೈರನ್ ವ್ಯವಸ್ಥೆ ಮಾಡಿಕೊಳ್ಳುವಂತೆ ಹಾಗೂ ಸಮಸ್ಯೆಗಳಿದ್ದಲ್ಲಿ ದೂರು ನೀಡುವ ಪ್ರಸಂಗಗಳಲ್ಲಿ 112 ಗೆ ಕರೆ ಮಾಡಿ (ಸಹಾಯವಾಣಿ) ತಿಳಿಸುವಂತೆ ಸೂಕ್ತ ತಿಳುವಳಿಕೆ ನೀಡಲಾಗಿದೆ.

ಕಡತ ಸಂಖ್ಯೆ : ಹೆಚ್‌ಡಿ 30 ಪಿಸಿಕ್ಯೂ 2021

(ಆರಗ ಜ್ಞಾನೇಂದ್ರ)
ಗೃಹ ಸಚಿವರು

ಅನುಬಂಧ

ಬೆಂಗಳೂರು ನಗರ.

ಶೀರ್ಷಿಕೆ	2018		2019		2020		2021 (31-08-21)	
	ವರದಿ	ಪತ್ತೆ	ವರದಿ	ಪತ್ತೆ	ವರದಿ	ಪತ್ತೆ	ವರದಿ	ಪತ್ತೆ
ಹತ್ಯೆ	19	17	12	10	12	12	9	9
ಚಿನ್ನಾಭರಣ ಕಳವು	100	24	41	18	36	20	19	4
ಇತರೆ ದೌರ್ಜನ್ಯ	156	114	394	280	343	256	318	218
ಒಟ್ಟು	**275**	**155**	**447**	**308**	**391**	**288**	**346**	**231**

ಬೆಂಗಳೂರು ಜಿಲ್ಲೆ.

ಶೀರ್ಷಿಕೆ	2018		2019		2020		2021 (31-08-21)	
	ವರದಿ	ಪತ್ತೆ	ವರದಿ	ಪತ್ತೆ	ವರದಿ	ಪತ್ತೆ	ವರದಿ	ಪತ್ತೆ
ಹತ್ಯೆ	0	0	1	1	1	1	1	1
ಚಿನ್ನಾಭರಣ ಕಳವು	5	5	17	14	16	15	19	4
ಇತರೆ ದೌರ್ಜನ್ಯ	42	41	69	60	43	43	53	47
ಒಟ್ಟು	**47**	**46**	**87**	**75**	**60**	**59**	**73**	**52**